ಶ್ರೀ ಹೆಚ್. ವಿ. ಕೌಜಲಗಿ.—ಇದರಲ್ಲಿ ಬೇರೆ ಹುಕುಂ ಹೊರಡಿಸುವುದೇನೂ ಇಲ್ಲ. ಮಾನ್ಯ ಸದಸ್ಯರು ಯಾವುದಾದರೂ ನಿರ್ದಿಷ್ಟ ಸಂದರ್ಭವನ್ನು ಸರಕಾರದ ಗಮನಕ್ಕೆ ತಂದರೆ ಇದರ ಬಗ್ಗೆ ಏನಾದರೂ ಚೌಕಾಸಿ ಮಾಡಲು ನಾವು ಮಾರ್ಗ ಮಾಡಬಹುದು.

ಶ್ರೀ ಬೊಳಾ ರಘುರಾಮ ಶೆಟ್ಟಿ.—ಉತ್ತರದಲ್ಲಿ ಜನವರಿ 3ನೇ ತಾರಿಖು 1969 ರಲ್ಲಿ ಆಜ್ಞೆ ಕೊಡಲಾಗಿದೆ ಎಂದು ಹೇಳಿದರೆ ಯಾವ ತಾರಿಖಿನಿಂದ ಇಲ್ಲಿ ನೋಟಿಫಿಕೇಷನ್ ಹೊರಡಿಸಲಾಯಿತು? ಇಷ್ಟು ವಿಳಂಬವಾಗಲಿಕ್ಕೆ ಕಾರಣವೇನು ?

ಶ್ರೀ ಹೆಚ್. ವಿ. ಕೌಜಲಗಿ.—ಇತ್ತೀಚೆಗೆ ಕೋರ್ಟಿನಲ್ಲಿ ರಿಟ್ ಪಿಟಿಷನ್‌ಗಳ ಬಗ್ಗೆ ತೀರ್ಮಾನ ವಾಗಿತ್ತು. ಇದನ್ನು ಸರಕಾರ ನೋಡಿ ತೀರ್ಮಾನ ತೆಗೆದುಕೊಳ್ಳುವುದರಲ್ಲಿ ಸ್ವಲ್ಪಕಾಲ ಬೇಕಾ ಯಿತು. ಇದನ್ನೆಲ್ಲಾ ಸರಿಯಾಗಿ ವಿಚಾರ ಮಾಡಿ ಆ ನಂತರ ಎಲ್ಲ ಅಧಿಕಾರಿಗಳಿಗೂ ಸೂಕ್ತವಾದ ಸೂಚನೆಗಳನ್ನು ಕೊ:ರ್ಟಿನ ಆರ್ಡರು ಅನುಸರಿಸಿ ಕೊಡಲಾಗಿದೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೂರಾರು ಎಕರೆಗಳಷ್ಟು ಜಮೀನನ್ನು ಸ್ವಂತವಾಗಿಟ್ಟುಕೊಂಡು ರೈತರ ಹೆಸರಿನಲ್ಲಿ ಅನ್ ಅಥರೈಸ್ ಆಗಿ ಸಾಗುವಳಿ ಮಾಡಿ ಕೊಂಡು ಬರುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ? ಇದಕ್ಕೆ ಸರಕಾರವೂ ಕೂಡ ಬೆಂಬಲ ಕೊಡುತ್ತಿರುವುದು ನಿಜವೇ ?

ಶ್ರೀ ಹೆಚ್. ವಿ. ಕೌಜಲಗಿ.—ಹಾಗೇನಿಲ್ಲ. ದಕ್ಷಿಣ ಕನ್ನಡ ಜಿಲ್ಲೆ ಮೊದಲು ಮದ್ರಾಸು ರಾಜ್ಯದಲ್ಲಿತ್ತು. ಇಲ್ಲಿಯವರೆಗೂ ಅಲ್ಲಿರುವ ರೂಲ್ಸನ್ನು ಅನುಸರಿಸಿಕೊಂಡೇ ಬರುತ್ತಿದ್ದರು. ಈಗ ಯೂನಿಫಾರಂ ಆಗಿ ಕಾನೂನು ಮಾಡುತ್ತಿರುವುದರಿಂದ ಎಲ್ಲ ಕಡೆಗಳಲ್ಲೂ ಫಾರಂ ನಂಬರು 16 ಎನ್ನುವುದನ್ನು ಇಡಬೇಕೆಂದು ಸೂಚನೆ ಕೊಡಲಾಗಿದೆ. ಇದರಂತೆ ಅಧಿಕಾರಿಗಳು ಕ್ರಮ ತೆಗೆದು ಕೊಳ್ಳುತ್ತಿದ್ದಾರೆ. ಇದರಲ್ಲಿ ಪ್ರತಿಯೊಬ್ಬರ ಹೆಸರೂ ಬರುತ್ತಿದೆ, ಮತ್ತು ಎಲ್ಲ ವಿವರಗಳೂ ಸಿಗುತ್ತವೆ.

Compensation paid to the Ryots affected due to Hematvathi Project

98. **Sri H. B. JWALANAIAH** (Hassan).—

Will the Chief Minister be pleased to refer to the replies given to Starred Question No. 551 on 18th March 1970 and state :—

(*a*) the amount spent on the Hemavathy Project in respect of the portion of work done by the Department and in respect of the portion of work done by the Contractor, separately ;

(*b*) the amount paid as crop compensation and land compensation to the ryots who lost their lands on account of submersion and channel digging under this Project ?

Sri VEERENDA PATIL (Chief Minister).—

(*a*) Amount spent up to end of June 1970 on:—

(i) Work done by the Department : Rs. 6.00 lakhs.

(ii) Work done by the contractors : Rs. 191.91 lakhs.

(*b*) Amount paid as :

(i) Crop compensation : Rs. 1,91,857 up to end of June 1970.

(ii) Land compensation : Rs. 64,63,908.86 up to end of July 1970.

ಶ್ರೀ ಹೆಚ್. ಬಿ. ಚ್ಚಾಲನಯ್ಯ.—ಇಲ್ಲಿ ಪರಿಹಾರ ನೀಡಲು ಇಬ್ಬರು ಲ್ಯಾಂಡ್ ಅಕ್ವಿಸಿಷನ್ ಅಧಿಕಾರಿಗಳು ಇದ್ದರೂ, ಇವರು ಎಲ್ಲ ಕೇಸುಗಳನ್ನೂ ಪರಿಶೀಲನೆ ಮಾಡಿ ಒಂದು ವರ್ಷದಲ್ಲಿ 30—40 ಅವಾರ್ಡುಗಳನ್ನು ಬರೆಯುವುದೇ ಕಷ್ಟವಾಗುತ್ತಿದೆ. ಇದರಿಂದ ಅನೇಕ ರೀತಿಯ ತೊಂದರೆಗಳು ರೈತರಿಗೆ ಆಗುತ್ತಿವೆ. ಇಂತಹ ತೊಂದರೆಗಳನ್ನು ತಪ್ಪಿಸುವ ಸಲುವಾಗಿ ಸರಕಾರದವರು ಏನಾದರೂ ಬೇರೆ ರೀತಿ ವ್ಯವಸ್ಥೆ ಮಾಡಿ ಬೇಕಾದರೆ ಇದಕ್ಕಾಗಿ ಇನ್ನೂ ಎಂಟು ಹತ್ತು ಲ್ಯಾಂಡ್ ಅಕ್ವಿಸಿಷನ್ ಅಧಿಕಾರಿಗಳನ್ನು ನೇಮಕ ಮಾಡಿ ಇವರಿಗೆರ್ಲಾ ಸರಿಯಾದ ಪರಿಹಾರಗಳನ್ನು ಕೊಡುವ ಬಗ್ಗೆ ಯೋಚನೆ ಮಾಡುತ್ತಾರೆಯೇ ?

†ಶ್ರೀ ವೀರೇಂದ್ರ ಪಾಟೀಲ್.—ಇವಕ್ಕೇನೂ ಹೊಸದಾಗಿ ಲ್ಯಾಂಡ್ ಅಕ್ವಿಸಿಷನ್ ಅಧಿಕಾರಿಗಳು ಬೇಕಾಗಿಲ್ಲ. ಇವರಲ್ಲಿ ಡಿಲೇ ಏನಾದರೂ ಆಗುತ್ತಿದ್ದರೆ ಇದಕ್ಕೆ ಬೇರೆ ಏನಾದರೂ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬಹುದು. ಈಗಿರುವ ಲ್ಯಾಂಡ್ ಅಕ್ವಿಸಿಷನ್ ಆಫೀಸರುಗಳು ಕೆಲಸಗಳನ್ನು ಚೆನ್ನಾಗಿ ಮಾಡುತ್ತಿದ್ದಾರೆ. ಇವರ ಎಕ್ಸ್‌ಪೀರಿಯನ್ಸ್ ಪ್ರಕಾರ ಇನ್ನೂ ಹೆಚ್ಚು ಕೆಲಸಗಳು ಬಂದಿವೆ ಎಂದು ಗೊತ್ತಾದರೆ ಇದಕ್ಕೆ ಹೆಚ್ಚು ಸಿಬ್ಬಂದಿ ಬೇಕು ಎನ್ನುವುದು ಕಂಡು ಬಂದರೆ ಇದನ್ನು ಆಗ ವಿಚಾರ ಮಾಡಿ ಕೊಡಬಹುದು.

ಶ್ರೀ ಹೆಚ್. ಬಿ. ಚ್ಚಾಲನಯ್ಯ.—ಇಲ್ಲಿ ಜಮೀನನ್ನು ಮುಳುಗಡೆಯಾಗಿ ತೊಂದರೆಪಡುತ್ತಿರುವ ರೈತರಿಗೆ ಕಾಡುಗಳಲ್ಲಿ ಕೆಲವು ಕಡೆ ಜಮೀನನ್ನು ರಿಲೀಸುಮಾಡಿ ಇಂತಹವರಿಗೆ ಭೂಮಿ ಕೊಡಬೇಕೆಂದು ಆರ್ಡರು ಮಾಡಿದ್ದರೂ ಅರಣ್ಯ ಇಲಾಖೆಯವರು ಇನ್ನೂ ಭೂಮಿಯನ್ನು ರಿಲೀಸ್ ಮಾಡಲು ತೊಂದರೆ ಮಾಡುತ್ತಿದ್ದಾರೆ ಎಂದು ಸಂಬಂಧಪಟ್ಟ ಮಂತ್ರಿಗಳಿಗೂ ಕೂಡ ಒತ್ತಾಯ ತರಲಾಗಿದೆ. ಇದರ ಬಗ್ಗೆ ಸೂಕ್ತ ಕ್ರಮವನ್ನು ಸರಕಾರ ತೆಗೆದುಕೊಳ್ಳುತ್ತದೆಯೇ ?

2-00 P.M.

ಶ್ರೀ ವೀರೇಂದ್ರಪಾಟೀಲ್.—ಬಹುಶಃ ಅಲ್ಲಿರತಕ್ಕ ಫಾರೆಸ್ಟ್ ಅಧಿಕಾರಿಗಳಿಗೂ ಮತ್ತು ಕನ್‌ಸರ್ವೇಟೀವ್ ಕಮಿಟಿಯವರಿಗೂ ಏದಾದರೂ ಭಿನ್ನಾಭಿಪ್ರಾಯ ಬಂದಿದ್ದರೂ ಇರಬಹುದು. ಅದನ್ನು ವಿಚಾರಮಾಡಬೇಕಾಗಿದೆ.

ಶ್ರೀ ಎನ್. ಎ. ಚೆನ್ನೇಗೌಡ.—(ಅ) ಪ್ರಶ್ನೆಗೆ ಉತ್ತರವಾಗಿ ಇರಾಖೆಯ ಮೂಲಕ ನಡೆಯತಕ್ಕ ಕಾಮಗಾರಿಗಳಿಗೂ ಮತ್ತು ಕಂಟ್ರಾಕ್ಟರ ಮೂಲಕ ನಡೆಯತಕ್ಕ ಕಾಮಗಾರಿಗಳಿಗೂ ಎಷ್ಟೆಷ್ಟು ಹಣವನ್ನು ಒದಗಿಸಲಾಗಿದೆ ಎಂಬುದನು ತಿಳಿಸಿದ್ದಾರೆ. ಅದರೆ ಈ ಕಾರ್ಯ ಬೇಗ ಮುಗಿಯಬೇಕಾಗಿರುವುದರಿಂದ ಇನ್ನೂ ಹೆಚ್ಚು ಹಣವನ್ನು ಒದಗಿಸಿ ಕೆಲಸವನ್ನು ಬೇಗ ಮುಗಿಸಲು ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರಪಾಟೀಲ್.—ಅದಕ್ಕೆ ಇಷ್ಟೇ ಹಣವನ್ನು ಒದಗಿಸಬೇಕೆಂಬ ಕಡ್ಡಾಯವೇನೂ ಇಲ್ಲ ಅಲ್ಲಿ ಈಗ ಖರ್ಚುಮಾಡಿರತಕ್ಕದ್ದನ್ನೆರ್ಲಾ ರೆಕ್ಕ ಹಾಕಿದರೆ ಇಲ್ಲಿ ಹೇಳಿರತಕ್ಕ ಮೊಬಲಗಿಗಿಂತ ಹೆಚ್ಚು ಹಣ ಅಲ್ಲನ ಕಟ್ಟಡಗಳಿಗೂ ಸಿಬ್ಬಂದಿ ವರ್ಗಕ್ಕೂ ಖರ್ಚಾಗಿದೆ. ಅಲ್ಲ ಇರಾಖೆಯವರು ಎಷ್ಟು ಹಣವನ್ನು ಖರ್ಚುಮಾಡಿದರೂ ಅಷ್ಟನ್ನೂ ಒದಗಿಸಲಾಗುತ್ತದೆ. ಇದಕ್ಕೆ ಹಣ ಇಲ್ಲ ಎಂಬ ಪ್ರಶ್ನೆಯೇ ಇಲ್ಲ. ಅಲ್ಲಿ ಇಂಜಿನೀಯರು ಎಷ್ಟು ಖರ್ಚುಮಾಡಿದರೆ ಅಷ್ಟು ಹಣ ಒದಗಿಸುವುದಕ್ಕೆ ಸರ್ಕಾರ ಹಿಂದೆ ಮುಂದೆ ನೋಡುವುದಿಲ್ಲ.

ಶ್ರೀ ಎನ್. ಹುಚ್ಚುಮಾಸ್ತಿಗೌಡ.—ಇಂಥ ಯೋಜನೆಗಳಲ್ಲಿ ಜಮೀನನ್ನು ಕಳೆದುಕೊಂಡವರಿಗೆ ಹೊಸ ಅಚ್ಚುಕಟ್ಟು ಏರಿಯಾದಲ್ಲಿ ಜಮೀನಿದ್ದರೆ ಅದರಲ್ಲಿ ಪ್ರಯಾರಿಟಿ ಕೊಟ್ಟು ಪುನರ್ವಸತಿಗೆ ಸೌಕರ್ಯ ಒದಗಿಸಬೇಕೆಂದು ಸರ್ಕಾರದವರು ಆಜ್ಞೆ ಮಾಡದ ಏನಾ ಇದನ್ನು ಸಾರ್ವ್ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಸರ್ಕಾರದವರು ಈ ಬಗ್ಗೆ ಏನು ಕಾರ್ಯಕ್ರಮ ಕೈಗೊಳ್ಳುತ್ತಾರೆಂಬುದನ್ನು ತಿಳಿಸುವುದಕ್ಕೆ ಸಾಧ್ಯವೇ ?

ಶ್ರೀ ವೀರೇಂದ್ರಪಾಟೀಲ್.—ಕಮ್ಯಾಂಡ್ ಏರಿಯಾದಲ್ಲಿ ಜಮೀನಿದ್ದರೆ ಅದರಲ್ಲಿ ಭೂಮಿಯನ್ನು ಕಳೆದುಕೊಂಡವರಿಗೆ ಭೂಮಿಯನ್ನು ರಿಜರ್ವ್ ಮಾಡಬೇಕೆಂಬ ಪ್ರಾವಿಷನ್ ಈಗಾಗಲೇ ಜಾರಿಯಲ್ಲಿದೆ. ಆದರೆ ಭೂಹಂಚಿಕೆ ಕಮಿಟಿಯವರು ಹಾಗೆ ಅದನ್ನು ಕಡ್ಡಾಯಮಾಡುವುದಾದರೆ ಕಮ್ಯಾಂಡ್ ಏರಿಯಾದಲ್ಲಿ ಬೇರೆಯವರಿಗೆ ಭೂಮಿಯನ್ನು ಹಂಚುವುದಕ್ಕೆ ಭೂಮಿಯೇ ಇರುವುದಿಲ್ಲ ಎಂಬ ದೂರನ್ನು ಅವರು ಮಾಡುತ್ತಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಹಾಲಿ ಕೆಲಸಗಳು ಅಲ್ಲಿ ನಡೆಯುತ್ತಿರುವ ರೀತಿಯಲ್ಲೇ ಮುಂದುವರಿದರೆ ನಮ್ಮ ನಿರೀಕ್ಷಷಣೆಗೆ ಸರಿಯಾಗಿ ಕೆಲಸಗಳು ಮುಗಿಯುವುದಿಲ್ಲ. ಈಗ ಅಲ್ಲಿರತಕ್ಕ ಒಂದು ಇಂಜಿನಿಯರಿಂಗ್ ಡಿವಿಜನ್ ಅರ್ಥನ್ ಡ್ಯಾಂ ಕೆಲಸವನ್ನೂ ಮತ್ತು ಥಾನಲ್ ಡಿವಿಜನ್ ಕೆಲಸ ಈ ಎರಡನ್ನೂ ವಹಿಸಲಾಗಿದೆ. ಆದ್ದರಿಂದ ಕೆಲಸಗಳು ತ್ವರಿತವಾಗಿ ನಡೆಯುತ್ತಿಲ್ಲ ಇವನ್ನು ಬೈಫರ್‌ಕೇಟ್ ಮಾಡಬೇಕು. ಎರಡು ಪ್ರತ್ಯೇಕ ಬ್ರಾಂಚ್‌ಗಳನ್ನು ಮಾಡಬೇಕು. ಅದಕ್ಕೆ ಸರ್ಕಾರ ದವರು ಪರ್ಮಿಷನ್ ಕೊಡುವುದಕ್ಕೆ ತಯಾರಿದ್ದಾರೆಯೇ ?

ಶ್ರೀ ವೀರೇಂದ್ರಪಾಟೀಲ್.—ಕಂಟ್ರಾಕ್ಟರಿಗೆ ಅರ್ಥನ್ ಡ್ಯಾಂ ಕೆಲಸ ಕೊಟ್ಟರೆ ಸರಿಯಾಗಿ ನಡೆಯುವುದಿಲ್ಲ ಎಂದು ಆ ಕೆಲಸವನ್ನು ಇಲಾಖೆಯವರೇ ನಡೆಸುತ್ತಿದ್ದಾರೆ. ಅದಕ್ಕಾಗಿ ಅವರಿಗೆ ಕೆಲಸವನ್ನು ತ್ವರಿತವಾಗಿ ಮುಗಿಸಲು ಏನೇನು ಮೆಷಿನರಿಗಳನ್ನು ಅಲ್ಲಿ ಉಪಯೋಗಿಸಲು ಬೇಕೋ ಅವುಗಳನ್ನು ಕೊಳ್ಳುವುದಕ್ಕೆ ಎಷ್ಟು ಹಣಬೇಕಾದರೂ ಒದಗಿಸುವುದಕ್ಕೆ ಸರ್ಕಾರ ತಯಾರಾಗಿದೆ. ಅಲ್ಲಿ ಸಿಬ್ಬಂದಿಯ ಕೊರತೆ ಇದ್ದರೆ ಅದನ್ನು ನಿವಾರಣೆ ಮಾಡುವುದಕ್ಕೆ ಸರ್ಕಾರ ತಯಾರಾಗಿದೆ. ಅದಷ್ಟೂ ಕೆಲಸಗಳನ್ನು ಬೇಗ ಮುಗಿಸಬೇಕೆಂಬುದೇ ಸರ್ಕಾರದವರ ಆಸೆ.

ಶ್ರೀ ಎಚ್. ವಿ. ಜ್ಞಾನಯ್ಯ.—ಹೇಮಾವತಿ ಪ್ರಾಜೆಕ್ಟ ಕೆಲಸಗಳು ನಡೆಯುತ್ತಿರುವ ಕಡೆ ದೊಡ್ಡ ದೊಡ್ಡ ಕಂಟ್ರಾಕ್ಟರುಗಳು ಹೇಗೆ ಚೆನ್ನಾಗಿ ಕೆಲಸಗಳನ್ನು ಮಾಡುತ್ತಿದ್ದಾರೊ ಹಾಗೇ ಅಲ್ಲಿನ ಸಣ್ಣ ಸಣ್ಣ ಕಂಟ್ರಾಕ್ಟರುಗಳೂ ಕೂಡ ಕೆಲಸ ಮಾಡುತ್ತಿರುವುದರಿಂದ ಅಲ್ಲಿ ದೊಡ್ಡ ದೊಡ್ಡ ಕೆಲಸಗಳನ್ನೂ ಕೂಡ ಪೀಸ್ ವರ್ಕ್ ಮೇಲೆ ಏಕೆ ಕೊಡಬಾರದು ?

ಶ್ರೀ ವೀರೇಂದ್ರಪಾಟೀಲ್.—ದೊಡ್ಡ ದೊಡ್ಡ ಕೆಲಸಗಳನ್ನು ಹಾಗೆ ಒಡೆದು ಪೀಸ್‌ವರ್ಕ್ ಸಿಸ್ಟಂ ಮೇಲೆ ಹಂಚುವುದಕ್ಕಾಗುವುದಿಲ್ಲ. ಮತ್ತು ಅವರಂತೆ ಈ ಸಣ್ಣ ಸಣ್ಣ ಕಂಟ್ರಾಕ್ಟರು ಕೆಲಸವನ್ನು ಚೆನ್ನಾಗಿ ಮಾಡುತ್ತಾರೆಂದು ಯಾರೂ ಅಷ್ಯೂರ್ ಮಾಡುವುದಕ್ಕಾಗುವುದಿಲ್ಲ. ಅಲ್ಲಿರ ತಕ್ಕ ಸಣ್ಣ ಪುಟ್ಟ ಕೆಲಸಗಳೇನಿವೆ ಅವುಗಳನ್ನು ಮಾತ್ರ ಕೊಡಬಹುದು.

Damage To Crops On Account Of Floods Near Duggathi

111. **Sri B. H. YENKA NAIK** (Harapanahalli).—

Will the Minister for Revenue be pleased to state.—

(*a*) whether it has come to the notice of the Government that heavy loss was caused to the ryots as the stock of paddy crops was carried away from the nearby fields fields by the flood waters and the vehicular traffic was closed for three days on account of water logging on the bridge across the halla near Duggathi on Harapanahalli-Harihar Road due to heavy rains during the last part of the rainy season, *i.e.* in December 1969 ;

(*b*) if so, whether they have paid compensation to the affected ryots and if so, the amount paid ;

(*c*) whether they would pay more compensation to the affected ryots as the loss caused was very heavy ?

Sri H. V. KOUJALGI.—(Minister for Revenue)

(*a*) Yes.

(*b*) Yes. A subsidy of Rs. 1,400 was paid to 14 persons.

(*c*) This subsidy has been paid in accordance with rules.